ಶ್ರೀ ಕೆ. ಹೆಚ್. ಪಾಟೀಲ್.— ತಾವು ಅರ್ಧ ಗಂಟೆ ಚರ್ಚೆಗೆ ಒಪ್ಪಿದ್ದೀರಲ್ಲ, ಕಳಂಹಿಸಿ ಕೊಡುತ್ತೇವೆ.

ಅಧ್ಯಕ್ಷರು.—ಆಗಬಹುದು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸಿರುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಲಿಖಿತ ಮೂಲಕ ಉತ್ತರಿಸಿರುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡ ಲಾಗಿದೆ.

ರಾಜ್ಯದಲ್ಲಿ ತೆಂಗಿನ ಕಾಯಿ ಬೆಲೆ ಇಳಿ ಮುಖವಾಗಿರುವ ಬಗ್ಗೆ

೯೯. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ತೋಟಗಾರಿಕೆ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹಠಾತ್ ಆಗಿ ತೆಂಗಿನ ಕಾಯಿ ಬೆಲೆ ಇಳಿ ಮುಖವಾಗಿ ರೈತರಿಗೆ ತೊಂದರೆಯಾಗಿ ರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ತೆಂಗಿಗೆ ಬೆಂಬಲ ಬೆಲೆ ಜಾರಿಗೊಳಿಸಲು ಸರ್ಕಾರದವರು ಉದ್ದೇಶಿಸಿ ದ್ದಾರೆಯೆ ?

ಶ್ರೀ ಬಿ. ಸೋಮಶೇಖರ.—(ತೋಟಗಾರಿಕೆ ರಾಜ್ಯ ಸಚಿವರು.)

ಅ) ಕಳೆದ ವರ್ಷ ಅಂದರೆ ೧೫೫೯ನೇ ಸಾಲಿನಲ್ಲಿ ಜನವರಿ ಇಂದ ಡಿಸೆಂಬರ್‌ವರೆಗೆ ತೆಂಗಿನ ಬೆಲೆ ಸ್ವಲ್ಪ ಮಟ್ಟಿಗೆ ಇಳಿ ಮುಖವಾಗಿದೆ ಆದರೆ ಜನವರಿ ೧೯೬೦ರಿಂದ ತೆಂಗಿನ ಸಗಟು ಹಾಗೂ ಚಿಲ್ಲರೆ ಬೆಲೆಯಲ್ಲಿ ಏರಿಕೆ ಯಾಗಿರುವುದು ಕಂಡು ಬಂದಿರುತ್ತದೆ.

ಆ) ತೆಂಗಿಗೆ ಬೆಂಬಲ ಬೆಲೆ ನೀಡುವ ವಿಷಯ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದರಿಂದ ಪ್ರಯತ್ನ ಮಾಡಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ನಂದಾವರ ಹಿರಿಯ ಪ್ರಾಥಮಿಕ ಶಾಲೆ

೨೪೨. ಶ್ರೀ ಬಿ.ಎ. ಉಪಾರಬ್ಬ (ವಿಟ್ಲ) —ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ . ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ನಂದಾವರ ಹಿರಿಯ ಪ್ರಾಥಮಿಕ ಶಾಲೆ ಯಲ್ಲಿರುವ ವಿದ್ಯಾರ್ಥಿಗಳ ತರಗತಿವಾರು ಸಂಖ್ಯೆ ಎಷ್ಟು

ಆ) ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪಾಧ್ಯಾಯರ ಸಂಖ್ಯೆ ಎಷ್ಟು

ಇ) ಸದರಿ ಶಾಲೆಯಲ್ಲಿನ ಕಡಿಮೆ ಸಂಖ್ಯೆಯ ಉಪಾಧ್ಯಾಯರುಗಳಿಂದ ಕಾರ್ಯ ನಿರ್ವಹಣೆ ಮಾಡಲು ಸಾಧ್ಯವೇ

ಈ) ಈ ಬಗ್ಗೆ ಅವಶ್ಯ ವ್ಯವಸ್ಥೆ ಮಾಡಲು ಯಾವ ಕ್ರಮ ತೆಗೆದುಕೊಂಡಿದೆ.

ಶ್ರೀ ಹೆಚ್. ಜಿ. ಗೋವಿಂದೇ ಗೌಡ(ಪ್ರಾಥಮಿಕ ಮತ್ತು ವಯಂಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ತರಗತಿ ಮಕ್ಕಳ ಸಂಖ್ಯೆ

ತರಗತಿ	ಮಕ್ಕಳ ಸಂಖ್ಯೆ
೧	೧೬೪
೨	೧೧೪
೩	೧೦೭
೪	೯೩
೫	೪೨
೬	೫೦
೭	೫೦
	೬೬೦

ಆ) ೬ (ಮಂಜೂರಾಗಿರುವ ಶಿಕ್ಷಕರ ಸಂಖ್ಯೆ : ೫)

ಇ) ಇಲ್ಲ.

ಈ) ಈಗಾಗಲೇ ಈ ಜಿಲ್ಲೆಗೆ ಮಂಜೂರಾಗಿರುವ ೧೧೧ ಹುದ್ದೆಗಳ ಪೈಕಿ ಸಡರಿ ಶಾಲೆಗೆ ಸಾಕಷ್ಟು ಶಿಕ್ಷಕರನ್ನು ನೇಮಿಸುವಂತೆ ಆದೇಶ ನೀಡಲಾಗಿದೆ.

ರೈತರಿಗೆ ಬೀಜ, ಗೊಬ್ಬರ, ಕ್ರಿಮಿನಾಶಕ ವಸ್ತುಗಳನ್ನು ಒದಗಿಸುವ ಯೋಜನೆ.

೧೫೫. ಶ್ರೀ ಕೆ.ಹೆಚ್. ಪಾಟೀಲ್ (ಗದಗ).—ಮಾನ್ಯ ಕೃಷಿ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ರೈತರ ಹಿತದೃಷ್ಟಿಯಿಂದ ಮುಂಬಿನ ವರ್ಷಕ್ಕಾಗಿ ಹೊಸ ಸಾಲವಾಗಿ ಕೊಡುವ ಬೀಜ, ಗೊಬ್ಬರ, ಕ್ರಿಮಿನಾಶಕ ವಸ್ತುಗಳನ್ನು ಒದಗಿಸುವ ಬಗ್ಗೆ ಯೋಜನೆ ರೂಪಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ, ಅದರ ಅಂದಾಜು ವೆಚ್ಚವೆಷ್ಟು ?

ಇ) ಉತ್ತಮ ಬೀಜಗಳು ದೊರಕಬೇಕಾದಕೆ ಮುಂಜಾಗರೂಕತೆ ಅವಶ್ಯವಲ್ಲವೆ ?

ಶ್ರೀ ಬಿ. ಸೋಮಶೇಖರ (ಕೃಷಿ ರಾಜ್ಯ ಸಚಿವರು).

ಅ) ೧೯೮೬-೮೭ರಲ್ಲಿ ರೈತರಿಗೆ ಬೇಕಾಗುವ ಸಾಲವನ್ನು ಸಹಕಾರ ಸಂಘಗಳು, ವಾಣಿಜ್ಯ ಬ್ಯಾಂಕುಗಳು ಹಾಗೂ ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳು ತಮ್ಮ ಈಗಿನ ಯೋಜನೆಯಡಿಯಲ್ಲಿ ಒದಗಿಸುತ್ತಿವೆ.

ಆ) ೧೯೮೬-೮೭ನೇ ಸಾಲಿನಲ್ಲಿ ಒಟ್ಟು ರೂ. ೧೫೦೦ ಕೋಟಿಗಳ ಅಲ್ಪಾವಧಿ ಸಾಲದ ಅವಶ್ಯಕತೆಯಿದ್ದು, ಬೀಜ, ಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿಗಳೊಳಗೊಂಡಂತೆ, 'ಬಿ' ಘಟಕದ ಸಾಲದ ಅವಶ್ಯಕತೆ ರೂ. ೯೦೦ ಕೋಟಿಯಷ್ಟಾಗಿರುತ್ತದೆ. ಇದನ್ನು ೧೯೮೬-೮೭ರ ಯೋಜಿತ ಬೆಳೆಗಳ ವಿಸ್ತೀರ್ಣ ಮತ್ತು ವಿತ್ತೀಯ ಪ್ರಮಾಣದ ಆಧಾರದ ಮೇಲೆ ಅಂದಾಜು ಮಾಡಲಾಗಿದೆ. ಸಮಾರು ರೂ. ೪೫೦ ಕೋಟಿಗಳಷ್ಟು ಸಾಲವನ್ನು ಸಹಕಾರ ಸಂಘಗಳು, ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾಂತೀಯ ಗ್ರಾಮೀಣ ಬ್ಯಾಂಕಂಗಳ ಮೂಲಕ ಹಂಚುವ ಕಾರ್ಯಕ್ರಮವಿದೆ.

ಇ) ಇದರ ಅವಶ್ಯಕತೆಯಿದೆ. ರಾಷ್ಟ್ರೀಯ ಬೀಜ ನಿಗಮ ಮತ್ತು ಕರ್ನಾಟಕ ರಾಜ್ಯ ಬೀಜ ನಿಗಮ ಇವುಗಳ ಮೂಲಕ ಪ್ರಮಾಣಿತ ಹಾಗೂ ನಿಜ ಜೀವಿ ಬೀಜಗಳನ್ನು ಒದಗಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.